iihs™
INDIAN INSTITUTE FOR HUMAN SETTLEMENTS

ಉತ್ಪಾದನಾ ನಗರಗಳು

# ಕೈಗಾರಿಕಾ ನೀತಿ ಮತ್ತು ನಗರ ಬೆಳವಣಿಗೆ



## ಪರಿಚಯ

ಇತ್ತೀಚಿನವರೆಗೂ, ರಾಷ್ಟ್ರೀಯ ಅಥವಾ ಪ್ರಾಂತೀಯ ಸರ್ಕಾರೀ ನೀತಿಗಳಲ್ಲಿ ಭಾರತದ ನಗರಗಳು ಪ್ರಾಮುಖ್ಯತೆ ಪಡೆದಿಲ್ಲ. 1990ರ ಆರ್ಥಿಕ ಸುಧಾರಣೆಯಿಂದ, ನಗರ ಪ್ರದೇಶಗಳು ಆರ್ಥಿಕ ಬೆಳವಣಿಗೆಯ ಪ್ರಮುಖ ತಾಣಗಳಾಗಿ ಹೊರಹೊಮ್ಮಿದೆ. ಹಾಗಿದ್ದೂ, ಉದ್ಯೋಗ ಸೃಷ್ಟಿ ಮತ್ತು ನಗರ ಸುಧಾರಣೆಯ ಸಮಸ್ಯೆಗಳ ಕಡೆ ಸಾಕಷ್ಟು ಗಮನವನ್ನು ನೀಡಲಾಗಿಲ್ಲ.

ಈ ಸಮಸ್ಯೆಗಳನ್ನು ಪರಿಹರಿಸಲು, ಕೈಗಾರಿಕೆಗಳ ಮೂಲಕ ಬೆಳವಣಿಗೆ ಮತ್ತು ಈಗಿರುವ ನಗರಗಳ ಜನದಟ್ಟಣೆಯನ್ನು ಕಡಿಮೆ ಮಾಡಲು ನಿರ್ದಿಷ್ಟ ರೀತಿಯ ಕೈಗಾರಿಕಾ ವಸಾಹತನ್ನು ಸೃಷ್ಟಿಸುವ ಕಡೆ ಸರ್ಕಾರವು ಗಮನ ಹರಿಸಿದೆ. ರಫ್ತು-ಆಧಾರಿತ ಕೈಗಾರಿಕೀಕರಣವನ್ನು ಸುಗಮಗೊಳಿಸುವ ಸಲುವಾಗಿ ನಿರ್ದಿಷ್ಟ ವಲಯಗಳನ್ನು ಅಭಿವೃದ್ಧಿಪಡಿಸಲಾದ ಚೀನಾ ಹಾಗೂ ದಕ್ಷಿಣ ಕೊರಿಯಾದಂದತಹ ಇತರ ಪೂರ್ವ ಏಶಿಯಾ ದೇಶಗಳ ಯಶಸ್ಸುಗಳ ಮೇಲೆ ಈ ಬೆಳವಣಿಗೆಯ ಮಾದರಿಯು ಬಹಳಷ್ಟು ಅವಲಂಬಿತವಾಗಿದೆ. ಭಾರತದಲ್ಲಿ, ಕೈಗಾರಿಕಾ ಎಸ್ಟೇಟ್‌ಗಳು, ಪ್ರದೇಶಗಳು ಹಾಗೂ ಕಾರಿಡಾರ್‌ಗಳ ಅಭಿವೃದ್ಧಿಯು ಕೈಗಾರಿಕಾ ಕಾರ್ಯನೀತಿಯ ಭಾಗವಾಗಿವೆ.

ಈ ರೀತಿಯ ಹೊರಹೊಮ್ಮುತ್ತಿರುವ ವಸಾಹತುಗಳು ನಗರ-ಶೈಲಿಯ ಗುಣಲಕ್ಷಣಗಳನ್ನು ತೋರಿಸಿದರೂ, ಪ್ರಸ್ತುತದಲ್ಲಿ ಅದೇ ರೀತಿ ಆಡಳಿತಕ್ಕೆ ಒಳಪಟ್ಟಿಲ್ಲ. ಈ ರೀತಿಯ ಕಾರ್ಯನೀತಿಗಳ ಕಾರ್ಯಸಾಧ್ಯತೆ ಹಾಗೂ ಅಳವಡಿಕೆ, ಮತ್ತು ಅವುಗಳ ಯೋಜಿತ ಫಲಿತಾಂಶಗಳನ್ನು ಕುರಿತಾದ ಕೆಲವು ಊಹೆಗಳ ಮೇಲೆ ಅವುಗಳ ಅಭಿವೃದ್ಧಿಯು ಆಧರಿತವಾಗಿದೆ. ಈ ಕಾರ್ಯನೀತಿಗಳ ವಿಷದೀಕರಿಸಲಾದ ಉದ್ದೇಶಗಳನ್ನು ಸಾಧಿಸುವ ಸಲುವಾಗಿ, ಆರ್ಥಿಕ ಸಂರಚನೆ, ಭೂಮಿ ಹಾಗೂ ನಗರಾಡಳಿತದ ಮೇಲೆ ಗಮನ ಹರಿಸುವುದೂ ಮುಖ್ಯವಾಗಿದೆ.

## ಪ್ರಸ್ತುತ ಸಾಂಸ್ಥಿಕ ಹಾಗೂ ಕಾರ್ಯನೀತಿಯ ಪರಿಸರ

ಕೈಗಾರಿಕಾ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತುತ ಒತ್ತು, ಈ ಮೊದಲಿನ ಕಾರ್ಯನೀತಿಗಳಾದ ಸುವರ್ಣ ಚುತುಷ್ಪಥ/ಗೋಲ್ಡನ್ ಕ್ವಾಡ್ರಿಲಾಟರಲ್ ಹಾಗೂ ಉತ್ತರ-ದಕ್ಷಿಣ ಮತ್ತು ಪೂರ್ವ-ಪಶ್ಚಿಮ ಕಾರಿಡಾರ್‌ಗಳ ಅಭಿವೃದ್ಧಿಯ ಈ ಮೊದಲಿನ ಕಾರ್ಯನೀತಿಗಳ ಮುಂದುವರಿಕೆ ಆಗಿದ್ದು, ಇದು ಭಾರತದ ನಾಲ್ಕು ಪ್ರಮುಖ ನಗರಗಳ ನಡುವೆ ಸಂಪರ್ಕ ಕಲ್ಪಿಸುವತ್ತ ಒತ್ತು ನೀಡಿದೆ. ಸಾರಿಗೆ ಮೂಲಭೂತ ಸವಲತ್ತು, ಆದಾಯ ಮತ್ತು ಕಾರ್ಪೊರೇಟ್ ತೆರಿಗೆಯಂತಹ ಕೈಗಾರಿಕಾ ಅಭಿವೃದ್ಧಿಯ ಅಂಶಗಳು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದ್ದರೂ, ಕೈಗಾರಿಕಾ ಅಭಿವೃದ್ಧಿಯನ್ನು ಕುರಿತಾದ ಬಹುತೇಕ ಭಾಗವು ರಾಜ್ಯಗಳ ಮಟ್ಟದಲ್ಲಿ ನಿರ್ಧರಿತವಾಗುತ್ತದೆ.

ಪ್ರತ್ಯೇಕ ರಾಜ್ಯ ಸರ್ಕಾರಗಳು ವಿವಿಧ ಅಭಿವೃದ್ಧಿ ಪಥಗಳನ್ನು ಅನುಸರಿಸುತ್ತವೆ. ವಿಶೇಷವಾಗಿ, ಗುಜರಾತ ಹಾಗೂ ತಮಿಳುನಾಡು, ಕೈಗಾರಿಕೀಕರಣವನ್ನು ಆರ್ಥಿಕ ಕಾರ್ಯತಂತ್ರವಾಗಿ ಅಳವಡಿಸಿಕೊಂಡಿವೆ. ಭೂಸ್ವಧೀನ, ಹಾಗೂ ಯೋಜನೆ ಮತ್ತು ಸ್ಥಳೀಯ ಮಟ್ಟದ ಅರೆಸರ್ಕಾರಿ ಸಂಸ್ಥೆಗಳ ಮೂಲಕ ಕೈಗಾರಿಕೆಗಾಗಿ ಮೂಲಭೂತ ಸವಲತ್ತುಗಳನ್ನು ಒದಗಿಸುವ ಹೊಣೆಗಾರಿಕೆಯನ್ನು ರಾಜ್ಯಗಳು ಹೊಂದಿವೆ. ಅದರ ಫಲವಾಗಿ, ಈ ಪ್ರಕ್ರಿಯೆಯಲ್ಲಿ ನಗರ ಸ್ಥಳೀಯ ಸರ್ಕಾರಗಳು ಸೀಮಿತ ಪಾತ್ರವನ್ನು ವಹಿಸುತ್ತವೆ. ಈ ವಿಷಯವನ್ನು ಉದ್ದೇಶಿಸಲು, ಭಾರತ ಸರ್ಕಾರವು ಹಲವಾರು ಶಾಸನಾತ್ಮಕ ಹಾಗೂ ನಗರ ಕಾರ್ಯನೀತಿಗಳನ್ನು ಭಾರತವು ಅನುಷ್ಠಾನಗೊಳಿಸಿದೆ.

## ನಗರ ಕಾರ್ಯನೀತಿ

ವಿಕೇಂದ್ರೀಕರಣದ ಮೇಲೆ ಒತ್ತು ನೀಡಿ, ಚುನಾಯಿತ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಹಸ್ತಾಂತರಣದ ಮೇಲೆ ಒತ್ತು ನೀಡುವ 74ನೆಯ ಸಂವಿಧಾನಿಕ ತಿದ್ದುಪಡಿ ಕಾಯಿದೆಯನ್ನು (ಸಿಎಎ) ಭಾರತ ಸರ್ಕಾರವು ಜಾರಿಗೆ ತಂದಿತು.

2005ರಲ್ಲಿ, ಏಳು ವರ್ಷಗಳ ಅವಧಿಯಲ್ಲಿ, ನಗರದ ಮೂಲಭೂತ ಸವಲತ್ತುಗಳು ಹಾಗೂ ಆಡಳಿತ ಸುಧಾರಣೆಯ ಮೇಲೆ ಒತ್ತು ನೀಡುವ ಜವಾಹರ್‌ಲಾಲ್ ನೆಹರೂ ರಾಷ್ಟ್ರೀಯ ನಗರ ನವೀಕರಣ ಮಿಷನ್‌ನ್ನು (ಜೆಎನ್‌ಎನ್‌ಯುಆರ್‌ಎಮ್) ಭಾರತ ಸರ್ಕಾರವು ಪ್ರಾರಂಭಿಸಿತು. ಈ ಕಾರ್ಯಕ್ರಮವು ದಶಲಕ್ಷಕ್ಕಿಂತ-ಹೆಚ್ಚಿನ ನಗರಗಳು, ರಾಜ್ಯ ರಾಜಧಾನಿಗಳು, ಹಾಗೂ ತಾಂತ್ರಿಕ ಮಹತ್ವದ ಇತರ ನಗರಗಳಲ್ಲಿನ ಸುಧಾರಣೆಯ ಮೇಲೆ ಒತ್ತು ನೀಡಿತು.

ನಗರ ಕಾರ್ಯನೀತಿಯಲ್ಲಿ ಬದಲಾವಣೆಗಳಾದರೂ, ಗಣನೀಯ ಸಂಖ್ಯೆಯ ನಗರ ನಿವಾಸಿಗಳು ಅಧಿಕ ಮಟ್ಟಗಳ ಅಭಾವ/ಕೊರತೆಯನ್ನು ಅನುಭವಿಸುತ್ತಾರೆ. ವಿಭಜಿತ ಆಡಳಿತ ವ್ಯವಸ್ಥೆಗಳು, ಮೂಲಭೂತ ಸವಲತ್ತುಗಳು ಹಾಗೂ ಸೇವೆಗಳ ಕಳಪೆ ಮಟ್ಟಗಳು, ಹಾಗೂ ಸೂಕ್ತ ಉದ್ಯೋಗಾವಕಾಶಗಳ ಕೊರತೆಯನ್ನು ಭಾರತೀಯ ನಗರಗಳು ಅನುಭವಿಸುತ್ತಲೇ ಇವೆ. ಇದಕ್ಕೆ ಸರ್ಕಾರದ ಪ್ರತಿಕ್ರಿಯೆಗಳ ಪೈಕಿ, ನೂತನ ಆರ್ಥಿಕ ವಸಾಹತುಗಳ ಸೃಷ್ಟಿಯು ಒಂದಾಗಿದೆ.

# ಹೊರಹೊಮ್ಮುತ್ತಿರುವ ಆರ್ಥಿಕ ವಸಾಹತುಗಳು

## ವಿಶೇಷ ಆರ್ಥಿಕ ವಲಯಗಳು (ಎಸ್‌ಇಜೆಡ್‌ಗಳು)

ಹೂಡಿಕೆಯನು ಆಕರ್ಷಿಸಿ, ರಫ್ತನ್ನು ಉತ್ತೇಜಿಸಿ, ಉದ್ಯೋಗವನ್ನು ಸೃಷ್ಟಿಸಿ, ಮೂಲಭೂತ ಸವಲತ್ತುಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ, ಭಾರತ ಸರ್ಕಾರವು ಎಸ್‌ಇಜೆಡ್ ಕಾಯಿದೆಯನ್ನು 2005ರಲ್ಲಿ ಜಾರಿಗೆ ತಂದಿತು. ಎಸ್‌ಇಜೆಡ್‌ಗಳ ಯೋಜನೆ, ಅಭಿವೃದ್ಧಿ ಹಾಗೂ ಧನಸಹಾಯದ ಹೊಣೆಗಾರಿಕೆಯು ಖಾಸಗಿ ಡೆವಲಪರ್ಸ್‌ಗೆ ವಹಿಸಿದ್ದರೆ, ಸರ್ಕಾರವು ಭೂಸ್ವಾಧೀನಕ್ಕೆ ನೆರವು, ತೆರಿಗೆ ಹಾಗೂ ಇತರ ಆರ್ಥಿಕ ಉತ್ತೇಜಕಗಳ ಒದಗಣೆ, ಹಾಗೂ ಅನುಮೋದನೆಗಳನ್ನು ನೀಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಪ್ರಕ್ರಿಯೆಯಲ್ಲಿ ಸರ್ಕಾರವು ನೆರವು ಒದಗಿಸುತ್ತದೆ.

ಮಾಹಿತಿ ತಂತ್ರಜ್ಞಾನ/ಮಾಹಿತಿ ತಂತ್ರಜ್ಞಾನ ಸಶಕ್ತ ಸೇವಾ (ಐಟಿ/ಐಟಿಇಎಸ್) ವಲಯದಲ್ಲೇ ಅರ್ಧದಷ್ಟು ವಲಯಗಳು ಇದ್ದವೆಂದು ಎಸ್‌ಇಜೆಡ್ ಕಾರ್ಯನೀತಿಯ ಮಾಪನವು ತೋರಿಸಿದೆ. ಎಸ್‌ಇಜೆಡ್‌ಗಳ ನಿರ್ದಿಷ್ಟ ಸಂದರ್ಭಗಳು ಯಶಸ್ವಿಯಾಗಿದ್ದರೂ, ಅಪೇಕ್ಷಿತ ಮಟ್ಟಗಳ ಫಲಿತಾಂಶ ಹಾಗೂ ಉದ್ಯೋಗವನ್ನು ಸೃಷ್ಟಿಸುವಲ್ಲಿ ಅವು ಯಶಸ್ವಿಯಾಗಲಿಲ್ಲ. ಇವುಗಳಿಗೆ ಕೆಲವು ಮುಖ್ಯ ಕಾರಣಗಳೆಂದರೆ ಭೂಸ್ವಾಧೀನದಲ್ಲಿನ ಸಮಸ್ಯೆಗಳು, ಹಾಗೂ ಈ ಪ್ರಮಾಣದಲ್ಲಿ ಯೋಜನೆಗಳಿಗೆ ಆರ್ಥಿಕ ಹೂಡಿಕೆ ಮಾಡುವಲ್ಲಿ ಖಾಸಗಿ ಡೆವಲಪರ್ಸ್‌ನ ಅಸಾಮರ್ಥ್ಯ.

## ಕೈಗಾರಿಕಾ ಕಾರಿಡಾರ್‌ಗಳು

ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯು ಕ್ಲಸ್ಟರ್ ಹಾಗೂ ಪ್ರಾದೇಶಿಕ ಅಭಿವೃದ್ಧಿಯ ಮೇಲೆ ಗಮನ ಹರಿಸಿದೆ. ರಾಷ್ಟ್ರೀಯ ಹೂಡಿಕೆ ಉತ್ಪಾದನಾ ವಲಯಗಳ ಸ್ಥಾಪನೆ (ಎನ್‌ಐಎಮ್‌ಜೆಡ್‌ಗಳು) ಹಾಗೂ, ದೇಶದಲ್ಲಿ ಉತ್ಪಾದನೆಯನ್ನು ವಿಸ್ತರಿಸಲು ಪ್ರಸ್ತುತವಿರುವ ವಸಾಹತುಗಳನ್ನು ಕೈಗಾರಿಕಾ ಕಾರಿಡಾರ್‌ಗಳ ಮೂಲಕ ಸಂಪರ್ಕ ಕಲ್ಪಿಸುವ ಉದ್ದೇಶವನ್ನು ಹೊಂದಿದೆ. ಈ ಕೈಗಾರಿಕಾ ಕಾರಿಡಾರ್‌ಗಳನ್ನು ಮೀಸಲಿಟ್ಟ ರೈಲು ಸರಕು ಕಾರಿಡಾರ್‌ಗಳ ಸುತ್ತ (ಡಿಎಫ್‌ಸಿ - ಡೆಡಿಕೇಟೆಡ್ ರೈಲ್ ಫ್ರೈಟ್ ಕಾರಿಡಾರ್ಸ್) ಯೋಜಿಸಲ್ಪಡುತ್ತಿದ್ದು, ಇದು ಗಮನಾರ್ಹ ಅಂತರರಾಷ್ಟ್ರೀಯ ಹೂಡಿಕೆಯನ್ನು ಆಕರ್ಷಿಸಿದೆ. ಕೈಗಾರಿಕಾ ಕಾರಿಡಾರ್‌ಗಳ ಪ್ರಾರಂಭಿಕ ಉದಾಹರಣೆಯೆಂದರೆ, ದೆಹಲಿ-ಮುಂಬಯಿ ಕೈಗಾರಿಕಾ ಕಾರಿಡಾರ್‌ನ (ಡಿಎಮ್‌ಐಸಿ) ಅಭಿವೃದ್ಧಿ. ಡಿಎಮ್‌ಐಸಿಯಲ್ಲಿ, ಗುಜರಾತಿನ ಧೋಲೆರಾದ ಯೋಜಿತ ವಿಶೇಷ ಹೂಡಿಕೆ ಪ್ರದೇಶದಂತಹ ಕೈಗಾರಿಕಾ ಕ್ಷೇತ್ರಗಳು ಹಾಗೂ ಹೂಡಿಕೆಯ ಪ್ರದೇಶಗಳ ಸೃಷ್ಟಿಯು ಸೇರಿದೆ. ಮುಂಬಯಿ ಹಾಗೂ ಬೆಂಗಳೂರು, ಬೆಂಗಳೂರು ಹಾಗೂ ಚೆನ್ನೈ, ಅಮೃತ್ಸರ ಹಾಗೂ ಕೊಲ್ಕತ್ತಾ, ಹಾಗೂ ಪೂರ್ವ ಸಮುದ್ರತೀರದ ಆರ್ಥಿಕ ವಲಯದಂತಹ ಇದೇ ರೀತಿಯ ಕಾರಿಡಾರ್‌ಗಳನ್ನು ಯೋಜಿಸಲಾಗಿದೆ.

# ಅಪಾಯಗಳು ಹಾಗೂ ಇತಿಮಿತಿಗಳು

**ಕಾರ್ಯಸಾಧ್ಯತೆ**: ಭಾರತದಲ್ಲಿ ಹೊಸ ನಗರ ಅಭಿವೃದ್ಧಿಯ ಪೂರ್ವ ಅನುಭವಗಳ ಪ್ರಕಾರ, ಹೊಸ ವಸಾಹತುಗಳ ಸ್ಥಾಪನೆಯು ಅಧಿಕ ಅಪಾಯದಿಂದ ಕೂಡಿದ್ದು, ಅದು ಫಲಿತಾಂಶ ನೀಡಲು ದೀರ್ಘಾವಧಿಯನ್ನು ತೆಗೆದುಕೊಳ್ಳುತ್ತದೆ.

**ಭೂಸ್ವಾಧೀನ**: ಎಸ್‌ಇಜೆಡ್‌ಗಳ ಅಭಿವೃದ್ಧಿಯಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ವ್ಯವಸ್ಥಿತಗೊಳಿಸುವುದು ಪ್ರಮುಖ ತೊಡಕಾಗಿದ್ದು, ಡಿಎಮ್‌ಐಸಿಯ ಮಾದರಿಯಲ್ಲಿ ಯೋಜಿತವಾಗುತ್ತಿರುವ ಕೈಗಾರಿಕಾ ಪಟ್ಟಣಗಳಂತಹ ಯೋಜನೆಗಳ ಯಶಸ್ವೀ ಪೂರ್ಣಗೊಳಿಸುವಿಕೆಯನ್ನು ಕುರಿತಾದ ಕಳಕಳಿಯು ಹಾಗೆಯೇ ಉಳಿದಿದೆ. 2013ರಲ್ಲಿ ಜಾರಿಗೆ ತರಲಾದ ಹೊಸ ಭೂಸ್ವಾಧೀನ-ನಾಮ ಮಸೂದೆಯೊಂದಿಗೆ, ಭೂಸ್ವಾಧೀಯ ಪ್ರಕ್ರಿಯೆ, ಹಾಗೂ ಅದರೊಂದಿಗೆ ಸಂಬಂಧಿಸಿದ ವೆಚ್ಚಗಳ ಹೆಚ್ಚಳವು, ರಾಜ್ಯ ಸರ್ಕಾರಗಳು ಹಾಗೂ ಅದರ ಸಂಸ್ಥೆಗಳಿಗೆ ಸವಾಲಾಗೇ ಪರಿಣಮಿಸಿದೆ.

**ನೀರು**: ಸ್ವಚ್ಛ, ತಾಜಾ ನೀರಿನ ಸುಲಭ ಲಭ್ಯತೆಯು ಹೊಸ ವಸಾಹತುಗಳ ಅಭಿವೃದ್ಧಿಯಲ್ಲಿ ನಿರ್ಣಾಯಕ ತೊಡಕಾಗಿದೆ. ಈಗಾಗಲೇ ತೀವ್ರರೀತಿಯ ನೀರಿನ ಅಭಾವಗಳನ್ನು ಎದುರಿಸುತ್ತಿರುವ ಗುಜರಾತ ಹಾಗೂ ರಾಜಸ್ಥಾನದಂತಹ ರಾಜ್ಯಗಳಲ್ಲಿ, ಡಿಎಮ್‌ಐಸಿಯ ನಿಟ್ಟಿನಲ್ಲೇ ಹೊಸ ವಸಾಹತುಗಳನ್ನು ಪ್ರಸ್ತಾಪಿಸಲಾಗಿದೆ.

**ಆಹಾರ ಸುರಕ್ಷತೆ**: ನಗರ ಹಾಗೂ ಕೈಗಾರಿಕಾ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಮಾಣದ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವುದರಿಂದ, ಆಹಾರ ಸುರಕ್ಷತೆಯ ಬಗ್ಗೆಯೂ ಕಳಕಳಿಗಳು ಹೆಚ್ಚುತ್ತಿವೆ.

**ಪಾರಿಸಾರಿಕ ಪ್ರಭಾವ**: ತೀವ್ರರೀತಿಯ ನೈಸರ್ಗಿಕ ಸಂಪನ್ಮೂಲಗಳ ತೊಡಕುಗಳು, ವಿಪತ್ತು ಅಪಾಯಗಳು, ಅಥವಾ ಅಂತಹ ವಸಾಹತುಗಳ ಸೃಷ್ಟಿಯಿಂದ ಉಂಟಾಗುವ ಪಾರಿಸಾರಿಕ ಪ್ರಭಾವಗಳನ್ನು ಈ ಕಾರ್ಯನೀತಿಗಳು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇಂತಹ ಅನೇಕ ವಸಾಹತುಗಳು, ಹವಾಮಾನ ಬದಲಾವಣೆಯಿಂದ ಉಲ್ಬಣಗೊಳ್ಳಬಹುದಾದ ಬರ, ನೆರೆ, ಭೂಕಂಪಗಳು, ಹಾಗೂ ಚಂಡಮಾರುತಗಳು ಸಂಭವಿಸುವ ಪ್ರದೇಶಗಳಲ್ಲಿ ಇವೆ.

**ನಗರಾಡಳಿತ**: ಎಸ್‌ಇಜೆಡ್‌ಗಳು, ಕೈಗಾರಿಕಾ ಪಟ್ಟಣಗಲು, ಹಾಗೂ ಕೈಗಾರಿಕಾ ಕಾರಿಡಾರ್‌ಗಳಿಗೆ ಸೇರಿದಂತಿರುವ ಹಾಗೂ 74ನೆಯ ಸಿಎಎದ ಪರಿಚ್ಛೇದ 243ಕಿರ ಅಡಿಯಲ್ಲಿ ಸ್ಥಾಪಿತವಾದ ಅಭಿವೃದ್ಧಿ ಪ್ರಾಧಿಕಾರಗಳಂತಹ ಅರೆಸರ್ಕಾರಿ ಸಂಸ್ಥೆಗಳ ಅಡಿಯಲ್ಲಿ ಆಡಳಿತಕ್ಕೆ ಒಳಪಡುವ ಬೃಹತ್ ವಿಶೇಷ ಹೂಡಿಕೆ ಪ್ರದೇಶಗಳನ್ನು (ಎಸ್‌ಐಆರ್‌ಗಳು) ಸ್ಥಾಪಿಸುವ ಯೋಜನೆಯನ್ನು ರೂಪಿಸಲಾಗುತ್ತಿದೆ; ಆದರೆ, 74ನೆಯ ಸಿಎಎದ ಪರಿಚ್ಛೇದ 243ಕಿರ ಅಡಿಯಲ್ಲಿ, ಕೈಗಾರಿಕಾ ಪಟ್ಟಣಗಳೆಂದು ನಿಯೋಜಿತವಾದ ಪ್ರದೇಶಗಳಿಗೆ ಸ್ಥಳೀಯ ಚುನಾಯಿತ ಸಂಸ್ಥೆಗಳ ಸ್ಥಾಪನೆಗೆ ವ್ಯವಸ್ಥೆಯನ್ನು ಮಾಡಲಾಗಿದೆ.

# ವಿಶೇಷ ಆರ್ಥಿಕ ವಲಯಗಳು: ಚೀನಾ ಅನುಭವ

ನಿರ್ಬಂಧಿತ/ಮುಚ್ಚಿದ ಚೀನಾ ಆರ್ಥಿಕ ವ್ಯವಸ್ಥೆಯನ್ನು ತೆರೆಯಲು, ವಿಶೇಷ ಆರ್ಥಿಕ ಉತ್ತೇಜಕಗಳ ಮೂಲಕ 1970ರ ಉತ್ತರಾರ್ಧದಲ್ಲಿ ವಿಶೇಷ ಆರ್ಥಿಕ ವಲಯಗಳನ್ನು (ಎಸ್‌ಇಜೆಡ್‌ಗಳು) ಸ್ಥಾಪನೆ ಮಾಡಲಾಯಿತು. ಪ್ರಾರಂಭದಲ್ಲಿ, ಕೇವಲ ಆರು ಎಸ್‌ಇಜೆಡ್‌ಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಅವುಗಳನ್ನು ನಗರಗಳಾಗಿ ಅಭಿವೃದ್ಧಿಪಡಿಸಲಾಯಿತು. ಅಂದಿನಿಂದ, ಪ್ರಸ್ತುತವಿರುವ ವಸಾಹತುಗಳೊಂದಿಗೆ ಏಕೀಕೃತಗೊಳಿಸಲಾದ ವಿಶೇಷ ಉತ್ಪಾದನಾ ವಲಯಗಳ ಮೂಲಕ, ಚೀನೀ ಸರ್ಕಾರವು, ಹಂತಹಂತವಾಗಿ ಅಸ್ತಿತ್ವದಲ್ಲಿರುವ ಇತರ ಅನೇಕ ಕಡಲ ತೀರದ ನಗರಗಳು ಹಾಗೂ ಪಟ್ಟಣಗಳನ್ನು, ಹಾಗೂ ಮತ್ತಷ್ಟು ಒಳನಾಡಿನ ನಗರಗಳು ಹಾಗೂ ಪಟ್ಟಣಗಳನ್ನೂ ಗುರುತಿಸಿ, ಅವುಗಳನ್ನು ವಿದೇಶೀ ಹೂಡಿಕೆಗೆ ತೆರೆಯಿತು. ಎಸ್‌ಇಜೆಡ್‌ಗಳ ಅಭಿವೃದ್ಧಿಗೆ ಹಣಕಾಸು ವ್ಯವಸ್ಥೆಯನ್ನೂ, ಹಾಗೂ ಭೂಮಿಯನ್ನೂ ಮೂಲಭೂತ ಸವಲತ್ತಾಗಿ ಚೀನೀ ಸರ್ಕಾರವು ಒದಗಿಸಿತು. ಇಂತಹ ಸುಧಾರಣೆಗಳಲ್ಲಿ ಅನುಭವ ಹೊಂದದ ಸರ್ಕಾರವು, ಎಸ್‌ಇಜೆಡ್‌ಗಳ ಸ್ಥಾಪನೆಯನ್ನು ದೊಡ್ಡ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವ ಮುನ್ನ, ಈ ರೀತಿಯ ಎಸ್‌ಇಜೆಡ್‌ಗಳ ಸ್ಥಾಪನೆಯನ್ನು ಪ್ರಯೋಗಾಲಯವಾಗಿ ಬಳಸಿತು. ಜೊತೆಗೆ, ಬಂಡವಾಳಶಾಹಿ ವ್ಯವಸ್ಥೆಯ ಸಂಭವನೀಯ ನಕಾರಾತ್ಮಕ ಪ್ರಭಾಗಳಿಂದ ಆರ್ಥಿಕ ವ್ಯವಸ್ಥೆಯನ್ನು ಇದು ನಿರೋಧಿಸಿತು. ಆದರೆ, ವಿದೇಶೀ ಹೂಡಿಕೆಗೆ ಚೀನಾದ ಇತರ ಪ್ರದೇಶಗಳು ತೆರೆಯುತ್ತಿದ್ದಂತೆಯೇ, ಎಸ್‌ಇಜೆಡ್‌ಗಳ ಮಹತ್ವವು ಇಳಿಯತೊಡಗಿತು. ಪ್ರಾರಂಭದಲ್ಲಿ ಎಸ್‌ಇಜೆಡ್‌ಗಳು ಇದ್ದ ಭೌಗೋಳಿಕ ಪ್ರದೇಶಗಳು ವೇಗದ ಆರ್ಥಿಕ ಬೆಳವಣಿಗೆಯನ್ನು ಕಂಡರೂ, ವಿವಿಧ ವಲಯಗಳಾದ್ಯಂತ ಈ ಯಶಸ್ಸು ಬೇರೆಬೇರೆ ಮಟ್ಟಗಳಲ್ಲಿ ಇದ್ದು, ಕೇವಲ ಶೆನ್ಜೆನ್ ಮಾತ್ರ ಸಂಪೂರ್ಣ ಯಶಸ್ಸನ್ನು ಕಂಡಿತು. ನಿವಾಸಿಗಳ ಬೃಹತ್-ಪ್ರಮಾಣದ ಸ್ಥಳಾಂತರಣ, ಕಾರ್ಮಿಕ ನಿಂದನೆ/ಕಿರುಕುಳ, ಹಾಗೂ ಊಹಾಪೋಹಗಳು ಮತ್ತು ಭೂಕಳವಿಗೆ ಸಂಬಂಧಿಸಿದ ವಿಷಯಗಳೂ ಇವೆ.

ಚೀನೀ ಮಾದರಿ ಹಾಗೂ ಅದನ್ನು ಭಾರತಕ್ಕೆ ಅನ್ವಯಿಸುವುದರ ನಡುವೆ ಹಲವಾರು ವ್ಯತ್ಯಾಸಗಳಿವೆ. ಮೊದಲನೆಯದಾಗಿ, ಚೀನೀ ಎಸ್‌ಇಜೆಡ್‌ಗಳು ಇದ್ದ ಸ್ಥಾನಗಳು ಸೀಮಿತವಾಗಿದ್ದವು. ಇದರ ಹೋಲಿಕೆಯಲ್ಲಿ, ಸ್ಥಾಪಿಸಬಹುದಾದ ಎಸ್‌ಇಜೆಡ್‌ಗಳ ಸಂಖ್ಯೆಯನ್ನು ಭಾರತದಲ್ಲಿ ಮಿತಿಗೊಳಿಸಲಿಲ್ಲ. ಅಲ್ಲದೆ, ಚೀನೀ ಎಸ್‌ಎಇಜೆಡ್‌ಗಳ ಪ್ರಮಾಣವು ತಮ್ಮ ಭಾರತೀಯ ಪ್ರತಿರೂಪಕ್ಕಿಂತ ಬಹಳಷ್ಟು ದೊಡ್ಡದಾಗಿದೆ. ಎರಡನೆಯದಾಗಿ, ಭೂಮಿಯ ಸ್ವಾಮ್ಯತೆಯನ್ನು ತಮ್ಮಲ್ಲೇ ಇರಿಸಿಕೊಂಡ ಚೀನೀ ಸರ್ಕಾರವು, ಈ ವಲಯಗಳಲ್ಲಿನ ಮೂಲಭೂತ ಸವಲತ್ತಿನ ವ್ಯವಸ್ಥೆ ಹಾಗೂ ಆರ್ಥಿಕ ನೆರವನ್ನು ನೀಡುವುದನ್ನು ಮುಂದುವರೆಸಿತು; ಭಾರತದಲ್ಲಿ, ಮೂಲಭೂತ ಸವಲತ್ತುಗಳ ವ್ಯವಸ್ಥೆಯೂ ಸೇರಿದಂತೆ, ಎಸ್‌ಇಜೆಡ್‌ಗಳ ಸಂಪೂರ್ಣ ಅಭಿವೃದ್ಧಿಯ ಹೊಣೆಗಾರಿಕೆಯನ್ನು ಖಾಸಗಿ ಡೆವಲಪರ್ಸ್‌ಗೆ ವಹಿಸಲಾಗಿದೆ. ಮೂರನೆಯದಾಗಿ, ಚೀನಾದಲ್ಲಿ ಮಾಡಿದಂತೆ, ಕೇವಲ ಅಂತರರಾಷ್ಟ್ರೀಯ ಬಂಡವಾಳವನ್ನು ತರುವತ್ತ ಮಾತ್ರ ಭಾರತ ಗಮನ ಹರಿಸದೆ, ದೇಶೀಯ ಹೂಡಿಕೆಯನ್ನೂ ಉತ್ತೇಜಿಸಲಾಯಿತು. ನಾಲ್ಕನೆಯದಾಗಿ, ಒಟ್ಟಾರೆಯಾಗಿ ಭಾರತೀಯ ಆರ್ಥಿಕ ವ್ಯವಸ್ಥೆಯು ಈಗಾಗಲೇ ವಿದೇಶೀ ನೇರ ಹೂಡಿಕೆಯನ್ನು (ಎಫ್‌ಡಿಐ) ಉತ್ತೇಜಿಸುತ್ತಿದ್ದು, ಎಸ್‌ಇಜೆಡ್‌ಗಳ ಆಕರ್ಷಣೆಯನ್ನು ಇದು ಕಡಿಮೆ ಮಾಡುವಲ್ಲಿ ಇದು ಪರಿಣಮಿಸಿತು.

# ಮುನ್ನಡೆ

**1. ಪ್ರಸ್ತುತ ವಸಾಹತುಗಳೊಂದಿಗೆ ಸಮನ್ವಯತೆ**

ಹೊಸ ಆರ್ಥಿಕ ಕ್ಲಸ್ಟರ್‌ಗಳ ಸೃಷ್ಟಿಯತ್ತ ಮಾತ್ರ ಗಮನ ಹರಿಸುವ ಬದಲು, ಈಗಾಗಲೇ ಅಸ್ತಿತ್ವದಲ್ಲಿರುವ ನಗರ ವಸಾಹತುಗಳಲ್ಲಿನ ಉದ್ಯೋಗ ಸಾಂದ್ರೀಕೃತ ಬೆಳವಣಿಗೆಯನ್ನು ಸೃಷ್ಟಿಸುವುದೂ ಮುಖ್ಯವಾಗುತ್ತದೆ. ಕಿರು, ಸಣ್ಣ ಹಾಗೂ ಮಧ್ಯಮ ಉದ್ಯಮಗಳಲ್ಲಿ ನಗರದ ಬಹುತೇಕ ಕಾರ್ಮಿಕಶಕ್ತಿಯು/ಕಾರ್ಯಪಡೆಯು ಉದ್ಯೋಗದಲ್ಲಿ ಇರುವುದರಿಂದ, ಇದರತ್ತ ಸ್ಪಷ್ಟ ಗಮನ ನೀಡುವ ಅಗತ್ಯವಿದೆ.

**2. ಕಾರ್ಮಿಕ/ದುಡಿಮೆ ಕೇಂದ್ರೀಕೃತ ಬೆಳವಣಿಗೆಯತ್ತ ಒತ್ತು ನೀಡುವುದು**

ಬಂಡವಾಳ-ತೀವ್ರ ಬೆಳವಣಿಗೆಯ ಈ ಹಿಂದಿನ ಪ್ರವೃತ್ತಿಗಳು ಮುಂದುವರೆದರೆ, ನಿರ್ದಿಷ್ಟವಾಗಿ ಆದ್ಯತೆ ನೀಡದ ಹೊರತು, ಈ ಕಾರ್ಯನೀತಿಗಳು ಉದ್ಯೋಗ ಸೃಷ್ಟಿಗೆ ದಾರಿ ಮಾಡಿಕೊಡುವುದಿಲ್ಲ. ಎಸ್‌ಇಜೆಡ್‌ಗಳು ಹಾಗೂ ಕಾರಿಡಾರ್‌ಗಳನ್ನು ಕುರಿತಾದ ಪ್ರಸ್ತುತ ಕಾರ್ಯನೀತಿಯು, ಅಲ್ಲಿ ಉತ್ತೇಜಿಸಲಾಗುವ ಕೈಗಾರಿಕೆಗಳನ್ನು ಕುರಿತು ನಿರ್ದಿಷ್ಟವಾಗಿ ತಿಳಿಸಿಲ್ಲ; ಎಸ್‌ಇಜೆಡ್‌ಗಳ ಅನೇಕ ಮಾಪನಗಳಿಂದ ತಿಳಿದು ಬಂದಿರುವುದೇನೆಂದರೆ, ಅವುಗಳ ಗುರಿಗೆ ಅನುಗುಣವಾಗಿ ಉದ್ಯೋಗವನ್ನು ಸೃಷ್ಟಿಸುವಲ್ಲಿ ವಿಫಲವಾಗಿವೆ ಎಂಬುದು.

**3. ಪ್ರಾದೇಶಿಕ ಅಸಮಾನತೆಗಳನ್ನು ಉದ್ದೇಶಿಸುವುದು**

ಸಣ್ಣ ಹಾಗೂ ಮಧ್ಯಮ ಗಾತ್ರದ ಪಟ್ಟಣಗಳು, ಮತ್ತು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಮೇಲೆ ಒತ್ತು ನೀಡುವ ಮೂಲಕ ಪ್ರಾದೇಶಿಕ ಅಸಮಾನತೆಗಳನ್ನು ಕಡಿಮೆ ಮಾಡುವತ್ತ ಕೇಂದ್ರ ಸರ್ಕಾರವು ಗಮನ ಹರಿಸುವ ಅಗತ್ಯವಿದೆ. ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು ಕೈಗಾರಿಕೀಕೃತವಾದ ಹಾಗೂ ಮಹಾನಗರಗಳಿಗೆ ಹತ್ತಿರವಾದ ಜಿಲ್ಲೆಗಳಲ್ಲಿ ಬಹುತೇಕ ಎಸ್‌ಇಜೆಡ್‌ಗಳ ಸ್ಥಾಪನೆಯನ್ನು ಮಾಡಲಾಯಿತು. ದೇಶದ ಬಹುತೇಕ ಸರಕು ಸಂಚಾರವನ್ನು ಒಯ್ಯುವ ಪ್ರಮುಖ ಸಾರಿಗೆ ಕಾರಿಡಾರ್‌ಗಳ ಸುತ್ತ ಕಾರಿಡಾರ್ ಕಾರ್ಯನೀತಿಯನ್ನು ಯೋಜಿಸಿರುವುದರಿಂದ, ಅದು ಅಸಮಾನತೆಗಳ ಪಥಗಳನ್ನು ಬಲಪಡಿಸುವ ಸಾಮರ್ಥ್ಯವನ್ನು ಹೊಂದಿದೆ.

**4. ಜೀವನೋಪಾಯ ಬದಲಾವಣೆಗಳ ಸುಗಮಗೊಳಿಸುವಿಕೆ**

ಭೂಸ್ವಾಧೀನತೆ, ಅದರಲ್ಲೂ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಾಗ, ಅದರಿಂದ ಪ್ರಭಾವಿತರಾದವರಿಗೆ ಪರ್ಯಾಯ ಉದ್ಯೋಗಗಳಿಗೆ ಬದಲಿಸಿಕೊಳ್ಳುವಲ್ಲಿ ನೆರವಾಗುವ ಸಲುವಾಗಿ ಸ್ಪಷ್ಟ ಯೋಜನೆಯನ್ನೂ ಜೊತೆಜೊತೆಗೇ ಮಾಡುವ ಅಗತ್ಯವಿದೆ. ಅದರಲ್ಲೂ ವಿಶೇಷವಾಗಿ, ದುಡಿಮೆಯ ಸ್ಥಳೀಯ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು, ನಿರ್ದಿಷ್ಟ ಉತ್ಪಾದನಾ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವತ್ತ ಗಮನ ನೀಡುವ ಅಗತ್ಯವಿದೆ.

**5. ನಗರ ಆಡಳಿತಕ್ಕೆ ಬದಲಾವಣೆ**

ಅಸ್ತಿತ್ವದಲ್ಲಿರುವ ನಗರಗಳಲ್ಲಿನ ನಿಯಮಗಳು ಮತ್ತು ಕಾನೂನುಗಳೇ ಈ ಉದಯೋನ್ಮುಖ ವಸಾಹತುಗಳಲ್ಲಿನ ನಿವಾಸಿಗಳಿಗೂ ಅನ್ವಯಿಸುವಂತೆ ಖಚಿತ ಪಡಿಸಿಕೊಳ್ಳುವುದು ಅಗತ್ಯ. ಉದಾಹರಣೆಗೆ, ಕೌಶಲ್ಯ ತರಬೇತಿಗಾಗಿ ಇತೀಚೆಗೆ ಘೋಷಿಸಿದ ಅಂಶ ಯೋಜನೆಯು ಕೇವಲ ಶಾಸನಬದ್ಧ ಪಟ್ಟಣಗಳಿಗೆ ಮಾತ್ರ ಅನ್ವಯಿಸುತ್ತದೆ; ಹಾಗಾಗಿ, ಈ ರೀತಿಯ ವಸಾಹತುಗಳು ಈ ಯೋಜನೆಯಿಂದ ಹೊರಗುಳಿಯುತ್ತದೆ. ಅಭಿವೃದ್ಧಿ ಪ್ರಾಧಿಕಾರಗಳಿಂದ ಚುನಾಯಿತ ಸ್ಥಳೀಯ ಸರ್ಕಾರಕ್ಕೆ ಕ್ರಮೇಣ ಬದಲಾವಣೆ ತರುವ ಸ್ಪಷ್ಟ ಯೋಜನೆಯನ್ನು ಹಾಕಿಕೊಳ್ಳುವುದೂ ಬಹಳ ಮುಖ್ಯ.

**6. ಪ್ರಾದೇಶಿಕ ಮೂಲಭೂತ ಸವಲತ್ತುಗಳನ್ನು ಅಭಿವೃದ್ಧಿಪಡಿಸುವುದು**
ಕೈಗಾರಿಕಾ ಕಾರಿಡಾರ್‌ಗಳಲ್ಲಿ ಬಂದರುಗಳು ಮತ್ತು ವಿಮಾನ ನಿಲ್ದಾಣಗಳಂತಹ ಸಹಾಯಕ ಮೂಲಭೂತ ಸವಲತ್ತುಗಳನ್ನು ಗಣನೀಯವಾಗಿ ವಿಸ್ತರಿಸುವ ಅಗತ್ಯವಿರುತ್ತದೆ. ಇಲ್ಲಿ ವಿದ್ಯುಚ್ಛಕ್ತಿ ಸರಬರಾಜನ್ನು ಹೆಚ್ಚಿಸುವುದು ಕೂಡಾ ಅಗತ್ಯ. ಭವಿಷ್ಯದಲ್ಲಿ, ಕಾರಿಡಾರ್ ಪ್ರಭಾವ ವಲಯದ ಆಚೆಗೂ ಸಂಪರ್ಕವನ್ನು ವಿಸ್ತರಿಸುವುದು ಬಹಳ ಮುಖ್ಯ.

## ಉಲ್ಲೇಖಗಳು


ಕಮ್ಪ್ಟ್ರೋಲರ್ ಆಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ, 2014. ರಿಪೋರ್ಟ್ ಆಫ್ ದ ಕಮ್ಪ್ಟ್ರೋಲರ್ ಆಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಆನ್ ಪರ್‌ಫಾರ್‌ಮೆನ್ಸ್ ಆಫ್ ಸ್ಪೆಷಲ್ ಇಕನಾಮಿಕ್ ಝೋನ್ಸ್ (ಎಸ್‌ಇಝೆಡ್‌ಸ್). ಕಮ್ಪ್ಟ್ರೋಲರ್ ಆಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ, ನ್ಯೂ ದೆಹಲಿ.

ಗೋಪಾಲಕೃಷ್ಣನ್, ಎಸ್. 2007. ನೆಗಟಿವ್ ಆಸ್ಪೆಕ್ಟ್ಸ್ ಆಫ್ ಸ್ಪೆಷಲ್ ಇಕನಾಮಿಕ್ ಝೋನ್ಸ್ ಇನ್ ಚೈನಾ. ಇಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, (1492-1494)

ಕ್ನಾಥ್, ಸಿ. 2000. ಸ್ಪೆಷಲ್ ಇಕನಾಮಿಕ್ ಝೋನ್ಸ್ ಆಂಡ್ ಇಕನಾಮಿಕ್ ಟ್ರಾನ್ಸ್‌ಫಾರ್ಮೇಷನ್.  ದ ಕೇಸ್ ಆಫ್ ದ ಪೀಪಲ್ಸ್ ರಿಪಬ್ಲಿಕ್ ಆಫ್ ಚೈನಾ. ಯುನಿವರ್ಸಿಟಾಟ್ ಕೊನ್ಸ್‌ಟಾನ್ಜ್.

ಮುಖೋಪಾಧ್ಯಾಯ್, ಪಿ. ಆಂಡ್ ಪ್ರಧಾನ್, ಕೆ.ಸಿ. 2009. ಲೊಕೇಷನ್ ಆಫ್ ಎಸ್‌ಇಝೆಡ್‌ಸ್ ಆಂಡ್ ಪಾಲಿಸಿ ಬೆನಿಫಿಟ್ಸ್ ವ್ಹಾಟ್ ಡಸ್ ದ ಡಾಟಾ ಸೇ? ಇನ್: ಸೆಂಟರ್ ಫಾರ್ ಪಾಲಿಸಿ ರಿಸರ್ಚ್ (ಎಡ್.) ಸಿಪಿಆರ್ ಅಕೇಷನಲ್ ಪೇಪರ್ ಸೀರೀಸ್. ನ್ಯೂ ದೆಹಲಿ.



iihs™
INDIAN INSTITUTE FOR HUMAN SETTLEMENTS

IIHS Bangalore City Campus
No. 197/36, 2nd Main Road
Sadashiva Nagar
Bangalore 560 080. India
T +91 80 6760 6666

www.iihs.co.in | info@iihs.co.in